## ನನ್ನ ಕನಸು!

'ಒಂದೇ ಮಂಟಪ, ಎರಡು ಮದುವೆ. ಮೂರು ಗಂಟಲ್ಲಿ ನಂಟಾಗೋ ನಾಲ್ಕು ಜೀವ.' ಇದು ಈಚೆಗಷ್ಟೇ ಆರಂಭವಾಗಿರುವ ಧಾರಾವಾಹಿಯೊಂದರ ಜಾಹೀರಾತಿನ ಸಾಲು. ಈ ಸಾಲನ್ನು ನಾನು ಈ ಕೆಳಗಿನಂತೆ ಮುಂದುವರಿಸುತ್ತೇನೆ.

'ಐದು ನಿಮಿಷ ಧಾರಾವಾಹಿ; ಆರು ನಿಮಿಷ ಬ್ರೇಕ್; ಏಳು ದಿನಗಳೂ ಹೀಗೇ, ಎಂಟು ವರ್ಷ ಎಳೆದಾಟ. ಒಂಬತ್ತು ಗಂಟೆ ರಾತ್ರಿಯಿಂದ ಹತ್ತು ಗಂಟೆವರೆಗೆ ಉಂಟಾಗೋ ವ್ಯರ್ಥ ನೋಟ.'

ಈ ಸಾಲುಗಳು ಬಹುತೇಕ ಎಲ್ಲ ಧಾರಾವಾಹಿಗಳಿಗೂ ಅನ್ವಯ. ಇದರ ಬದಲು, ಧಾರಾವಾಹಿಗಳು ಈ ಕೆಳಗಿನಂತಿದ್ದಿದ್ದರೆ...!

'ಒಂದೇ ವಸ್ತು, ಎರಡು ಮುಖ್ಯ ಪಾತ್ರ. ಮೂರು ನಿಮಿಷ ಬ್ರೇಕ್. ನಾಲ್ಕು ನಿಟ್ಟಿನ ನೋಟ. ಐದು ಭಕ್ಷ್ಯ (ಪಂಚಭಕ್ಷ್ಯ)ಗಳ ಜತೆಗೆ ಆರು ರಸ (ಷಡ್ರಸ)ಗಳ ಊಟ. ಏಳು ಬಣ್ಣಗಳ ಸೊಗಸು. ಎಂಟು ಪೋಷಕ ಪಾತ್ರ. ಒಂಬತ್ತು ರತ್ನ (ನವರತ್ನ)ಗಳ ಕಾಂತಿ. ಹತ್ತು ವಾರಕ್ಕೇ 'ಓಂ ಶಾಂತಿ.' ನನಗೆಲ್ಲೋ ಕನಸು!

—ಎಚ್.ಆನಂದರಾಮ ಶಾಸ್ತ್ರೀ, ಬೆಂಗಳೂರು

## ಮಸ್ತ್ ಮಜಾಭಾರತ

ಕಲರ್ಸ್ ಸೂಪರ್‌ನಲ್ಲಿ ಪ್ರಸಾರವಾಗುತ್ತಿರುವ 'ಮಜಾಭಾರತ' ಉತ್ತಮವಾಗಿ ಮೂಡಿಬರುತ್ತಿದೆ. ಎಸ್. ನಾರಾಯಣ್, ಶೃತಿಯವರಂತಹ ಪ್ರತಿಭಾವಂತರನ್ನು ತೀರ್ಪುಗಾರರನ್ನಾಗಿ ಹೊಂದಿರುವ ಈ ಕಾರ್ಯಕ್ರಮ ಮನಸ್ಸಿಗೆ ಮುದ ನೀಡುತ್ತಿದೆ. ಇಲ್ಲಿ ಭಾಗವಹಿಸಿರುವ ಮಂಗಳೂರು ಕಡೆಯ ಕೆಲವು ತಂಡಗಳು ತುಳುವಿನಲ್ಲಿ ಈಗಾಗಲೇ ಯಶಸ್ವಿಯೆನಿಸಿರುವ ಕೆಲವು ನಗೆ ನಾಟಕಗಳನ್ನು ಇಲ್ಲಿ ಪ್ರದರ್ಶಿಸುತ್ತಿದ್ದಾರೆ. ಪ್ರತಿಭಾವಂತ ನಟರ ಪ್ರಯತ್ನ, ನಿರ್ವಹಣೆ ಎರಡೂ ಶ್ಲಾಘನೀಯ. ಇಲ್ಲೊಂದು ಸಲಹೆ – ತುಳುಭಾಷೆಯ ಜನಪ್ರಿಯ ಹಾಸ್ಯ ಸಂಭಾಷಣೆಗಳನ್ನು ಯಥಾವತ್ತಾಗಿ ಕನ್ನಡಕ್ಕೆ ಅನುವಾದಿಸುವಾಗ ಭಾಷೆಯ ಕಡೆ ಸ್ವಲ್ಪ ಗಮನವಿರಲಿ. ಟಿ. ವಿ., ಚಲನಚಿತ್ರಗಳ ಪ್ರಭಾವದಿಂದ ಈಗ ದಕ್ಷಿಣ ಕನ್ನಡಿಗರೂ ಬೆಂಗಳೂರು ಕನ್ನಡವನ್ನೇ ಅನುಕರಿಸಲು ಪ್ರಯತ್ನಿಸುತ್ತಿದ್ದಾರೆ. ಈಗ ಅಷ್ಟಾಗಿ ಬಳಕೆಯಲ್ಲಿಲ್ಲದ 'ಮಂಗಳೂರು ಕನ್ನಡ' ಮಂಗಳೂರಿಗರಿಂದಲೇ ಹಾಸ್ಯಕ್ಕೆ ವಸ್ತುವಾಗುವುದು ಬೇಡ. ಉತ್ತಮ ಅಭಿನಯವೂ ಪ್ರೇಕ್ಷಕರಲ್ಲಿ ನಗು ತರಿಸಬಲ್ಲದು.

—ಮಂಗಳೂರು ಗಿರೀಶ್

ವಾರದ ಪತ್ರ

## ಜಾಹೀರಾತು ಓಕೆ; ಮನಬಂದಂತೆ ಏಕೆ?

ಟಿವಿ ಚಾನೆಲ್ ನಡೆಯುವುದೇ ಜಾಹೀರಾತು ಆದಾಯದ ಮೇಲೆ. ಅವುಗಳಿಗೆ ದೂರದರ್ಶನದಂತೆ ಯಾವುದೇ ರೀತಿಯ ಸರ್ಕಾರಿ ಅನುದಾನ ದೊರಕುವುದಿಲ್ಲ. ಚಾನೆಲ್‌ಗಳ ಅಳಿವು– ಉಳಿವು ಗಳಿಸುವ ಜಾಹೀರಾತು ಆದಾಯವನ್ನು ಅವಲಂಬಿಸಿದೆ. ಜಾಹೀರಾತುಗಳು ಒಂದು ಮಿತಿಯನ್ನು ಮೀರಿ ವೀಕ್ಷಕರಿಗೆ ಕಿರಿಕಿರಿ ಉಂಟು ಮಾಡಿದಾಗ, ಸರ್ಕಾರ ಮಧ್ಯ ಪ್ರವೇಶಿಸಿ ಜಾಹೀರಾತುಗಳು ಪ್ರತಿ ಅರ್ಧ ತಾಸಿಗೊಮ್ಮೆ ಆರು ನಿಮಿಷ ಮೀರಬಾರದೆಂದು ನಿರ್ದೇಶಿಸಿತು.

ಆದರೆ ಚಾನೆಲ್‌ಗಳು ಅತಿ ಜಾಣ್ಮೆಯಿಂದ ಈ ಕೋಟಾ ಮುಗಿದ ತಕ್ಷಣ, ಈ ನಿರ್ದೇಶನವನ್ನು ತಿರುಚಿ, ಕಾರ್ಯಕ್ರಮವನ್ನು ನಿಲ್ಲಿಸದೇ ಕಾರ್ಯಕ್ರಮದ ಮಧ್ಯೆ, ಧುತ್ತೆಂದು ಸ್ಕ್ರೀನ್‌ನ ಒಂದು ಪಕ್ಕದಲ್ಲಿ, ಕೆಳಗೆ, ಮೇಲೆ, ಬಲಕ್ಕೆ ಮತ್ತು ಎಡಕ್ಕೆ ಜಾಹೀರಾತನ್ನು ಅನಾವರಣಗೊಳಿಸುತ್ತಾರೆ. ಧಾರಾವಾಹಿಗಳು ನಡೆಯುವಾಗ ದಿಢೀರೆಂದು ಇನ್ನೊಂದು ಧಾರಾವಾಹಿಯ ಝಲಕ್ ಕಾಣುತ್ತದೆ ಮತ್ತು ಒಮ್ಮೊಮ್ಮೆ ಮೂರನೇ ಒಂದು ಭಾಗ ಸ್ಕ್ರೀನನ್ನು ತುಂಬಿಕೊಳ್ಳುತ್ತದೆ. ಹಾಗೆಯೇ ಮುಂದಿನ ಮತ್ತು ಮುಂಬರುವ ವಾರಗಳ ಕಾರ್ಯಕ್ರಮಗಳ ಪಟ್ಟಿಯನ್ನು ಪಕ್ಕದಲ್ಲಿಯೇ ತೋರಿಸಲಾಗುತ್ತದೆ. ನ್ಯೂಸ್ ಓದುವವರನ್ನು ಸ್ಕ್ರೀನ್‌ನಲ್ಲಿ ದಿಢೀರ್ ಹಿಂದೆ ಎಳೆದು, ಸಣ್ಣದಾಗಿಸಿ, ಓದುವವರ ಸುತ್ತಲೂ ಜಾಹೀರಾತನ್ನು ಹಾಕಲಾಗುತ್ತದೆ. ಕಾನೂನನ್ನು ಹೇಗೆ ತಿರುಚಬೇಕು ಎಂಬುದನ್ನು ಈ ಚಾನೆಲ್‌ದವರಿಂದ ಕಲಿಯಬೇಕು. ವೀಕ್ಷಕರು ಈ ಜಾಹೀರಾತು ಕಿರಿಕಿರಿಯಿಂದ ನೆಮ್ಮದಿ ಕಾಣಲು ಸಾಧ್ಯವೇ?

—ರಮಾನಂದ ಶರ್ಮಾ, ನವದೆಹಲಿ

## 'ಮಹಾದೇವ..'ದಲ್ಲಿ ತಪ್ಪು ಮಾಹಿತಿ

ಸ್ಟಾರ್ ಸುವರ್ಣ ವಾಹಿನಿಯು ಬಿತ್ತರಿಸುವ 'ಹರಹರ ಮಹಾದೇವ' ಧಾರಾವಾಹಿಯು ಸಂಭಾಷಣೆ, ಭಕ್ತಿ ರಸ, ವೈಭವೋಪೇತ ನಿರ್ಮಾಣದಿಂದ ಪ್ರೇಕ್ಷಕರನ್ನು ಹಿಡಿದಿಟ್ಟಿದೆ. ಮನವನ್ನು ನೋಯಿಸುವ, ಗೋಳನ್ನು ಪರಿಪರಿಯಾಗಿ ತೋರಿಸುವ ಇತರ ಧಾರಾವಾಹಿಗಳ ಮಧ್ಯೆ ವಿಭಿನ್ನ ಮತ್ತು ಉತ್ತಮ ಯತ್ನವಾಗಿದೆ.

ಆದರೆ ಕೆಲವು ತಪ್ಪುಗಳು ಅಭಾಸಕ್ಕೆ ಕಾರಣವಾಗಿವೆ.

ಶುಂಭ– ನಿಶುಂಭ, ರಕ್ತ ಬೀಜಾಸುರ, ಮಧು–ಕೈಟಭ, ಚಂಡ–ಮುಂಡ ಮತ್ತು ಮಹಿಷಾಸುರ– ಈ ಅಸುರರ ಹಾವಳಿ ಇರುವಾಗ, ದೇವಸೇನೆಗೆ ಸೇನಾಧಿಪತಿ ಇರುವುದಿಲ್ಲ. ದುರ್ಗೆಯೇ ಇವರನ್ನೆಲ್ಲ ಸಂಹರಿಸುತ್ತಾಳೆ. ತದನಂತರ ತಾರಕಾಸುರನನ್ನು ಕೊಲ್ಲುವ ಕುಮಾರಸ್ವಾಮಿ ಜನಿಸಿ, ದೇವಸೇನೆಯ ನಾಯಕನಾಗುತ್ತಾನೆ.

ನಾಡಿನ ಹಲವೆಡೆ ದೇವಿ ಪುರಾಣ ಪಠಿಸುವ ಭಕ್ತರಿರುವಾಗ, ಈ ಧಾರಾವಾಹಿಯಲ್ಲಿ ಕುಮಾರಸ್ವಾಮಿಯ ಜನನದ ನಂತರ ಅಸುರರು ಇರುವಂತೆ ತೋರಿಸಿರುವುದು ಅಭಾಸ ಎನಿಸುತ್ತದೆ.

—ಶಂಕರಮ್ಮ ಎಸ್.ಜಲಗೇರಿ, ಬೆಂಗಳೂರು

## 'ಸರಿಗಮಪ'ದಲ್ಲಿ ತಾರತಮ್ಯ

ಝೀ ಟಿವಿ ಕನ್ನಡದಲ್ಲಿ ಶನಿವಾರ ಮತ್ತು ಭಾನುವಾರ 'ಸರಿಗಮಪ' ಚೆನ್ನಾಗಿ ಮೂಡಿಬರುತ್ತಿದೆ. ಆದರೆ ಈ ಕಾರ್ಯಕ್ರಮದ ಕೆಲವು ಅಂಶಗಳು ಸರಿ ತೋರುತ್ತಿಲ್ಲ.

★ ಪುಟಾಣಿ ಆದ್ಯ ತನ್ನ ವಯಸ್ಸಿಗೆ ಮೀರಿದ ಪ್ರತಿಭೆ ಉಳ್ಳವಳು. ಆದರೆ ಸ್ಪರ್ಧಿಯೇ ಅಲ್ಲದ ಅವಳಿಗೆ ಎಲ್ಲರೂ ಪ್ರಾಮುಖ್ಯ ಕೊಡುವುದು, ಉಡುಗೊರೆಗಳನ್ನು ಕೊಡುವುದನ್ನು ಮಾಡುವುದು ಇತರ ಸ್ಪರ್ಧಿಗಳಿಗೆ ಅಸಮಾಧಾನ, ನೋವನ್ನು ಉಂಟು ಮಾಡುತ್ತದೆ.

★ ಕಾರ್ಯಕ್ರಮದಲ್ಲಿ ಒಟ್ಟು ಜ್ಯೂರಿಗಳ ಸಂಖ್ಯೆ 30. ಆದರೆ ಅವರಲ್ಲಿ ಇಬ್ಬರನ್ನು ಮಾತ್ರ ಫೋಕಸ್ ಮಾಡುತ್ತಾರೆ. ಉಳಿದವರು ಏನು ಪಾಪ ಮಾಡಿದ್ದಾರೋ ದೇವರೇ ಬಲ್ಲ!

—ದೀಪ್ತಿ ವಿನಯಕೃಷ್ಣ, ಬೆಂಗಳೂರು

## ಪುಟ್ಟಗೌರಿಗೆ ಮಂಗಳ ಹಾಡಿ

ಕನ್ನಡ ಕಲರ್ಸ್ ಟಿವಿಯ ಧಾರಾವಾಹಿ 'ಪುಟ್ಟಗೌರಿ ಮದುವೆ'ಯಲ್ಲಿ ಅಳುವ ಪುಟ್ಟಗೌರಿಯನ್ನು ದಿನವೂ ನೋಡಿ, ನೋಡಿ ನಮಗೆ ವಾಕರಿಕೆ ಬರುವಂತಾಗುತ್ತಿದೆ. ಈ ಧಾರಾವಾಹಿ ಯಾವಾಗ ಕೊನೆಯಾಗುತ್ತದೆಯೆಂದು ತಿಳಿಸಿ ನಮ್ಮನ್ನು ಈ ಕೆಟ್ಟ ಧಾರಾವಾಹಿಯ ವೀಕ್ಷಣೆಯಿಂದ ಪಾರುಮಾಡಬೇಕಾಗಿ ವಿನಂತಿ.

—ಬಿ.ಎಸ್. ಶಿವಕುಮಾರ್, ಬೆಂಗಳೂರು

## ನಕ್ಕು ನಲಿಸುವ 'ಶ್ರೀಮಾನ್..'

ಝೀ ಕನ್ನಡ ಚಾನೆಲ್‌ನಲ್ಲಿ ಪ್ರಸಾರವಾಗುವ 'ಶ್ರೀಮಾನ್ ಶ್ರೀಮತಿ' ಧಾರಾವಾಹಿ ಚೆನ್ನಾಗಿದೆ. ಸಂಜೆ ಆಫೀಸಿನಿಂದ ದಣಿದು ಬಂದು ಮನೆಯವರೊಡನೆ ನಕ್ಕು ನಲಿದು ನೋಡಿ ದಣಿವಾರಿಸಿಕೊಳ್ಳುವ ಧಾರಾವಾಹಿ. ಎಲ್ಲರ ಅಭಿನಯ ಮತ್ತು ಮಾತು ಚೆನ್ನಾಗಿವೆ. ಪುಟ್ಟಮಲ್ಲಿ (ಮಾತಿನ ಮಲ್ಲಿ) ಅಭಿನಯ, ವೇಷಭೂಷಣವಂತೂ ಅದ್ಭುತ. ಮಧುರಾಳ ಮನೆಗೆ ಪುಟ್ಟಮಲ್ಲಿ ಗಂಡ ಬರುವುದು, ಪುಟ್ಟಮಲ್ಲಿ ಮನೆಗೆ ಮಧುರಾಳ ಗಂಡ ಬರುವುದು ಒಂಥರಾ ನಗುವ ಹಾಗಿದೆ.

—ರುಕ್ಮಿಣಿ ಕೃ. ದೇಶಪಾಂಡೆ, ಗೋಕಾಕ